# ಮಾನಸ ಗಂಗೋತ್ರಿ

ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

ದಿನಾಂಕ:25/09/2016 ಸಂಚಿಕೆ:03 ಸಂಪುಟ:46 ಪುಟಗಳು:4 ಬೆಲೆ:2ರೂ


ಪ್ರಕೃತಿ ತಾಯಿಯ ಬಗ್ಗೆ ಕಾಳಜಿ ಇಲ್ಲದಂತಾಗಿದೆ



ಲಕ್ಷಾಂತರ ಪುಸ್ತಕಗಳ ಖಜಾನೆ ಅಂಕೇಗೌಡರ ಪುಸ್ತಕ ಮನೆ



ಪಡ್ಡೆ ಹುಡುಗರ ಜೀವನ ಗಾಥೆ ಕಿರೀಕ್ ಪಾರ್ಟಿ



# ಬಹುರೂಪಿ ಬಹು ಭಾಷಾ ನಾಟಕೋತ್ಸವಕ್ಕೆ ಚಾಲನೆ

ಭಾರತದ ಭೂಪಟದಲ್ಲಿ ದೆಹಲಿಯಲ್ಲಿರುವ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮವನ್ನ ಹೊರತು ಪಡಿಸಿದರೆ ತದನಂತರ ಸ್ಥಾನದಲ್ಲಿ ಮೈಸೂರು ರಂಗಾಯಣವೆ ಬಹು ಉತ್ತಮವಾದ ಕೆಲಸ ಮಾಡುತ್ತಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ಉಮಾಶ್ರೀ ಅಭಿಪ್ರಾಯ ಪಟ್ಟರು.



ಮೈಸೂರಿನ ಕಲಾ ಮಂದಿರದ ವನರಂಗದಲ್ಲಿ ನಡೆಯುತ್ತಿರುವ ಹಾಗೂ ರಂಗಾಯಣದ ರಂಗಸಮಾಜ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾಡಳಿತದ ಸಹಕಾರದಲ್ಲಿ ನಡೆಯುತ್ತಿರುವ 2017ನೇ ಸಾಲಿನ ಬಹುರೂಪಿ ಬಹುಭಾಷಾ ನಾಟಕೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು. ಇಂದು ಮೈಸೂರು ರಂಗಾಯಣವು ಉತ್ತಮವಾದ ಕೆಲಸವನ್ನ ಮಾಡುವುದರ ಜೊತೆಗೆ ಅನೇಕ ನಾಟಕಗಳನ್ನ ಮಾಡುವ ಮೂಲಕ ನಮ್ಮ ರಾಜ್ಯಕ್ಕೆ ಕೀರ್ತಿಯನ್ನ ತಂದುಕೊಟ್ಟಿದೆ ಎಂದರು.

ಬೇರೆ ರಾಜ್ಯಕ್ಕೆ ಹೋಲಿಸಿದರೆ ನಮ್ಮ ಸರ್ಕಾರವು ಸಾಹಿತ್ಯಕ ವಲಯದಲ್ಲಿ, ಜನಪದ, ಶಾಸ್ತ್ರೀಯ ಸಂಗೀತ, ರಂಗ ಭೂಮಿಯಲ್ಲಿ ದುಡಿಯು ತ್ತಿರುವ ಕಲಾವಿದರು, ಸಾಹಿತಿಗಳಿಗೆ ಪ್ರಶಸ್ತಿಗಳು ಹಾಗೂ ಗೌರವ ಧನ ನೀಡಿ ಅವರನ್ನು ಪ್ರೋತ್ಸಾಯಿಸಲಾಗುತ್ತಿದೆ. ರಂಗಭೂಮಿ ಕಲಾವಿದರ ಕ್ಷೇಮಾಭಿವೃದ್ಧಿಗೆ 5 ಕೋಟಿ 66 ಲಕ್ಷ ನೀಡಿದ್ದೇವೆ. ಕಾಲೇಜು ವಿದ್ಯಾರ್ಥಿಗಳು ನಾಟದಲ್ಲಿ ತೊಡಗಲು ಕಾಲೇಜು ರಂಗೋತ್ಸವದ ಮೂಲಕ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಹೇಳಿದರು.

ಇನ್ನೂ ಕಾರ್ಯಕ್ರಮದ ಮುಖ್ಯ ಅಥಿತಿಯಾದ ಶ್ರೀಲಂಕಾದ ಚಿಂತಕ ಹಾಗೂ ಖ್ಯಾತ ರಂಗ ಭೂಮಿ ನಿರ್ದೇಶಕ ಶ್ರೀ ಪರಾಕ್ರಮ ನಿರಿಯಲ್ಲ ಅವರು ಮಾತನಾಡಿ ಭಾರತದಲ್ಲಿ ನೂರಾರು ಭಾಷೆಗಳಿಂದ ಕೂಡಿದೆ ಆ ದರು ಸಹ ಏಕತೆ ಇಂದ ಇದ್ದಾರೆ. ಆದರೆ 2–3 ಭಾಷೆ ಇರುವ ನಮ್ಮ ದೇಶದಲ್ಲಿ ಇದು ಸಾದ್ಯವಾಗಿಲ್ಲ. 'ಭಾರತ ಭಾಷೆ ಹಾಗೂ ಸಂಸ್ಕೃತಿಯಲ್ಲಿ ವಿಭಿನ್ನವಾಗಿದ್ದರೂ ನಿಮ್ಮ ಏಕತಾ ಮನೋಭಾವಕ್ಕೆ ಎಲ್ಲರೂ ತಲೆ ಬಾಗುವಂ ತಿದೆ' ಎಂದರು.

ಈ ಸಂದರ್ಭದಲ್ಲಿ ಮಾನ್ಯ ಲೋಕೋಪಯೋಗಿ ಸಚಿವ ಹಾಗೂ ಮೈಸೂರು ಉಸ್ತುವಾರಿ ಸಚಿವ ಹೆಚ್.ಸಿ ಮಹದೇವಪ್ಪ, ಮೈಸೂರು ಪೌರರಾಗಿರುವ ಶ್ರೀ ಎಂ.ಜೆ. ರವಿಕುಮಾರ ಖ್ಯಾತ ಗಾಯಕಿ ಡಾ. ಜಯಶ್ರೀ ಮತ್ತು ಜಿಲ್ಲಾ ಪಂಚಾಯತಿ ಅಧ್ಯಕ್ಷೆ ನಯೀಮಾ ಸುಲ್ತಾನ್ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

**ಪುಸ್ತಕ, ವಸ್ತು ಪ್ರದರ್ಶನಕ್ಕೆ ಚಾಲನೆ:**

ಕ 'ಲಾ ಮಂದಿರದಲ್ಲಿ ನಡೆಯುತ್ತಿರುವ ಅಂತರ ರಾಷ್ಟ್ರೀಯ ಬಹುರೂಪಿ–2017 ಬಹು ಭಾಷಾ ನಾಟ ಕೋತ್ಸವದಲ್ಲಿನ ಪುಸ್ತಕ ಮತ್ತು ವಸ್ತು ಪ್ರದರ್ಶನವನ್ನು ಲೋಕೋಪಯೋಗಿ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್. ಸಿ ಮಹದೇವಪ್ಪ ಉದ್ಘಾಟಿಸಿದರು.

ರಂಗಾ ಯಣದ ರಂಗಸಮಾಜ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾಡಳಿತದ ಸಹಕಾರದಲ್ಲಿ ಜ.13 ರಿಂದ 18ರವರೆಗೆ ನಡೆಯಲಿರುವ ಬಹುರೂಪಿ – 2017 ಬಹುಭಾಷಾ ನಾಟಕೋತ್ಸವದ ಉದ್ಘಾಟನೆಗೂ ಮೊದಲು ನಡೆದ ಈ ಕಾರ್ಯಕ್ರಮಕ್ಕೆ ಪ್ರಖ್ಯಾತ ರಂಗ ನಿರ್ದೇಶಕ ಶ್ರೀ ಪರಾಕ್ರಮ ನಿರಿಯಲ್ಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಉಮಾಶ್ರಿ, ಶಾಸಕರು ಹಾಗೂ ಕಾರ್ಯಕ್ರಮದ ಅಧ್ಯಕ್ಷರು ಆದ ಶ್ರೀ ವಾಸು, ಮೇಯರ್ ಎಂ ಜೆ ರವಿಕುಮಾರ್, ನಟಿ ಬಿ ಜಯಶ್ರೀ ಮತ್ತಿತರರು ಇವರಿಗೆ ಸಾತ್ ನೀಡಿದರು.

ಉದ್ಘಾಟನೆಗೂ ಮುನ್ನ ಇವರುಗಳು ರಾಷ್ಟ್ರದ ವಿವಿಧ ಜಾನಪದ ಕಲಾ ತಂಡಗಳ ನೃತ್ಯವನ್ನು ವೀಕ್ಷಿಸಿದರು. ದೇಶದ ವಿವಿಧ ಭಾಗಗಳಿಂದ



ಬಂದಿದ್ದ ಕಲಾ ತಂಡಗಳ ನೃತ್ಯ ನೋಡುಗರ ಕಣ್ಮನ ಸೆಳೆದವು. ಅದರಲ್ಲು ಅಸ್ಸಾಂನ ಭಾರತ್ ಪೌಜಾ ಮಿಶ್ವ ನೃತ್ಯ ಮನವೋಹಕವಾಗಿತ್ತು.

ಚಾಲನೆ ಕೊಟ್ಟ ನಂತರ ಪ್ರದಶನದಲ್ಲಿರುವ ಮಳಿಗೆಗಳ ಬಳಿ ತೆರಳಿ ಪುಸ್ತಕ ಹಾಗೂ ವಸ್ತುಗಳ ಬಗ್ಗೆ ಮಾಹಿತಿ ಪಡೆದು ಕೊಂಡರು.

ಸಚಿವರ ಜೊತೆ ಶ್ರೀಲಂಕಾದ

–ಮಹದೇವು ಎನ್

# ಸಂಗೀತ ರಸದೌತಣ ಉಣಬಡಿಸಿದ ಜಯಶ್ರೀ

ಮೈಸೂರಿನ ರಂಗಾಯಣದಲ್ಲಿ ನಡೆಯುತ್ತಿರುವ ಬಹುರೂಪಿ ಅಂತರಾಷ್ಟೀಯ ಬಹುಭಾಷಾ ನಾಟಕೋತ್ಸವದ ಮೊದಲ ದಿನವಾದ ಇಂದು ವನರಂಗದಲ್ಲಿ ನಡೆದ ಭೂಮಿಗೀತ ಕಾರ್ಯಕ್ರಮದಲ್ಲಿ ಬಿ. ಜಯಶ್ರಿ ಹಾಗೂ ಪರಮೇಶ್ವರ್ ಪಂಡಿತ ರವರು ತಮ್ಮ ಸುಮಧುರ ಗಾಯನದ ಮೂಲಕ ನೆರದಿದ್ದ ಜನರ ಮನಸನ್ನು ಮುದಗೊಳಿಸಿದರು.




ಬಹುರೂಪಿ ನಾಟಕೋತ್ಸವ ಉದ್ಘಾಟನೆ ನಂತರ ನಡೆದ ಕಾರ್ಯಕ್ರಮದಲ್ಲಿ ಹೆಸರಾಂತ ರಂಗಕರ್ಮಿ, ನಟಿ, ಗಾಯಕಿಯಾದಂತಹ ಬಿ. ಜಯಶ್ರಿಯವರು ತಮ್ಮ ಗಾನಸುದೆಯ ಮೂಲಕ ಕೇಳುಗರಿಗೆ ಇಂಫನ್ನು ನೀಡಿದರಲ್ಲದೆ ಕೆಲಕಾಲ ಪ್ರೇಕ್ಷಕರನ್ನು ನಗಿಸಿದರು. ಭೂಮಿಗೀತ ಕಾರ್ಯಕ್ರಮದಲ್ಲಿ ಪರಮೇಶ್ವರ್ ಪಂಡಿತ್ ಹಾಗೂ ತಮ್ಮ ಸಂಗಡಿಗ ರೊಂದಿಗೆ ಸೇರಿ ಪುರಂದರದಾಸರ ಕೀರ್ತನೆಗಳು ಹಾಗೂ ಇತರೆ ಹಾಡುಗಳನ್ನು ಹಾಡುವ ಮೂಲಕ ಜನರನ್ನು ರಂಜಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ನಟಿ ಹಾಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ಉಮಾಶ್ರೀ ಅವರು ಜಯಶ್ರೀಯವರ ಹಾಡಿಗೆ ಹೆಜ್ಜೆ ಹಾಕಿದ್ದು, ಇನ್ನಷ್ಟು ಮೆರಗು ತಂದಿತು. ವಯಸ್ಸು 86ರಾದರು ಯಾರಿಗೇನು ಕಡಿಮೆ ಇಲ್ಲವೆಂಬಂತೆ ಪರಮೇಶ್ವರ್ ಪಂಡಿತ್ ರವರು ಹಾಡುವ ಮೂಲಕ ಪ್ರೇಕ್ಷಕ–ರಿಗೆ ಸಂಗೀತ ರಸದೌತಣ ನೀಡಿದರು.

–ಮೇಘನ ಎಚ್ ಎನ್




**ಹಿತನುಡಿ**

ಸಂಬಂಧಗಳು ನಾಲಿಗೆಗಿಂತ ಹೃದಯವನ್ನು ಇಷ್ಟಪಡುತ್ತವೆ. ಉದ್ದುದ್ದ ಮಾತುಗಳಿಗಿಂತ ಹೃದಯಕ್ಕೆ ಹತ್ತಿರವಾಗಬಲ್ಲ ಮೃದು ನಡುವಳಿಕೆ ನಮ್ಮದಾಗಲಿ.

**ಸಂಪಾದಕರು :** ಪ್ರೊ॥ ಮಹೇಶ್ ಚಂದ್ರಗುರು

**ವಿದ್ಯಾರ್ಥಿ ಸಂಪಾದಕರು :** ಮಹದೇವು ಎನ್
ಮೇಘನ ಎಚ್ ಎನ್
ಮಲ್ಲಿಕಾರ್ಜುನ್ ಬಿ ಆರ್
ಕೃಷ್ಣ. ಬಿ
ಮಹದೇವಸ್ವಾಮಿ

**ಪುಟ ವಿನ್ಯಾಸ :** ಅಕ್ಷಯ್ ಕೆ

**ಸಂಪಾದಕೀಯ**

# ಕಾಡುತ್ತಿದೆ ಭೀಕರ ಜಲಕ್ಷಾಮ ಭೀತಿ

ರಾಜ್ಯದಲ್ಲಿ ಹಿಂದೆಂದೂ ಕಂಡು ಕೇಳರಿಯದ ಭೀಕರ ಜಲಕ್ಷಾಮದ ಅಪಾಯ ಈಗ ಬಂದೆರಗಿದೆ. 143 ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ತೀವ್ರ ಕುಸಿತ ಕಂಡಿರುವುದು ಅದರ ಸ್ಪಷ್ಟ ಮುನ್ಸೂಚನೆ. ಹಲವು ನದಿಗಳ ಮೂಲವಾಗಿರುವ ಮಲೆನಾಡು ಹಾಗೂ ಅಧಿಕ ಮಳೆ ಬೀಳುವ ಕರಾವಳಿ ಪ್ರದೇಶಗಳಲ್ಲೂ ನೀರಿಗಾಗಿ ಹಾಹಾಕಾರ ಎದ್ದಿರುವುದು ಸದ್ಯದ ಚಿಂತಾಜನಕ ಸ್ಥಿತಿಗೆ ಹಿಡಿದ ಕೈಗನ್ನಡಿ.

ರಾಜ್ಯದ ಹಲವೆಡೆ ಬರಿದಾಗಿರುವ ಕೊಳವೆಬಾವಿಗಳು ನೀರಿಲ್ಲದೆ ಹೊರಡಿಸುತ್ತಿರುವ ಸದ್ದು ಸನಿಹದ ಭವಿಷ್ಯದಲ್ಲಿ ಎದುರಾಗಲಿರುವ ಗಂಡಾಂತರಕ್ಕೆ ಎಚ್ಚರಿಕೆ ಗಂಟೆ. ಇಂತಹ ಭೀಕರ ಸನ್ನಿವೇಶ ಸೃಷ್ಟಿಯಾಗಲು ಸರ್ಕಾರ ಹಾಗೂ ಸಮುದಾಯ ಎರಡೂ ಸರಿಸಮ ಅಪರಾಧಿಗಳು. ಸ್ವಯಂಕೃತ ಅಪರಾಧದಿಂದ ಮಾಡಿಕೊಂಡಿರುವ ಗಾಯಕ್ಕೆ ಸತತವಾಗಿ ಆವರಿಸಿದ ಬರಗಾಲ ಬರೆ ಎಳೆದಿದೆ.

'ನನ್ನ ಅಗತ್ಯ ನೀಗಿದರೆ ಸಾಕು' ಎಂಬ ಸಂಕುಚಿತ ಮನೋಭಾವದಿಂದ ಜನ ಪೈಪೋಟಿಗೆ ಬಿದ್ದು ಕೊಳವೆಬಾವಿಗಳನ್ನು ಕೊರೆಸಿ, ಮಿತಿಮೀರಿದ ಪ್ರಮಾಣದಲ್ಲಿ ನೀರಿನ ಬಳಕೆ ಮಾಡಿರುವುದು, ಜಲ ಮರುಪೂರಣಕ್ಕೆ ಯಾವುದೇ ಕ್ರಮ ಕೈಗೊಳ್ಳದಿರುವುದು, ಸಂಚಿತ ನಿಧಿಯಂತಿದ್ದ ಅಂತರ್ಜಲದ ಬಳಕೆ ಮೇಲೆ ಕಟ್ಟುನಿಟ್ಟಿನ ನಿರ್ಬಂಧ ವಿಧಿಸದೇ ಇರುವುದು, ಕೆರೆ?ಕುಂಟೆಗಳ ಮಹತ್ವವನ್ನು ಗ್ರಹಿಸದಿರುವುದು, ಜಲಮೂಲಗಳಿಗೆ ನೀರುಣಿಸುತ್ತಿದ್ದ ಕಾಲುವೆಗಳನ್ನೇ ಆಪೋಶನ ಮಾಡಿರುವುದು? ಹೀಗೆ ಇಂದಿನ ದುಃಸ್ಥಿತಿಗೆ ಕಾರಣವಾದ ಪ್ರಮಾದಗಳಿಗಾಗಿ ಆಡಳಿತ ವ್ಯವಸ್ಥೆ ಹಾಗೂ ಸಮಾಜ ತನ್ನನ್ನು ತಾನೇ ದೂಷಿಸಿಕೊಳ್ಳಬೇಕು.

ಜಲಮೂಲಗಳನ್ನು ನಾವು ಹೇಗೆ ಇಟ್ಟುಕೊಂಡಿದ್ದೇವೆ ಎಂಬುದಕ್ಕೆ ಬೆಂಗಳೂರಿನ ಕೆರೆಗಳು ರೂಪಕದಂತಿವೆ. ಒತ್ತುವರಿಯಿಂದ ಕೆರೆಗಳ ಪಾತ್ರ ಕುಗ್ಗಿಸಿದ್ದಲ್ಲದೆ ಅವುಗಳಿಗೆ ಪರಿಶುದ್ಧ ನೀರು ತರುತ್ತಿದ್ದ ರಾಜಕಾಲುವೆಗಳನ್ನು ಸಮಾಧಿ ಮಾಡಲಾಗಿದೆ. ಮನೆ?ಮನೆಯಿಗಳಲ್ಲಿ ಬಳಸಿಬಿಟ್ಟ ಹೊಲಸು ನೀರು ಕೆರೆಗಳ ಒಡಲು ತುಂಬುತ್ತಿದೆ.

ದೇಹದ ಕೊಳೆತ ಭಾಗದಲ್ಲಿ ರಕ್ತದ ಬದಲು ಕೇವಲ ಕೀವು ತುಂಬಿಕೊಳ್ಳುವಂತೆ ಕೆರೆ ಅಂಗಳ ಕೂಡ ಕೊಳಚೆ ನೀರಿನ ಆಗರ ಆಗಿಬಿಟ್ಟಿದೆ. ರಾಜ್ಯದ ಕೆಲವು ಭಾಗಗಳಲ್ಲಿ ಜಲಮೂಲಗಳ ಕತ್ತು ಹಿಸುಕಿರುವುದು ಕಲ್ಲು ಮತ್ತು ಮರಳು ಗಣಿಗಾರಿಕೆ. ಭೂಮಿಯ ಆಳಕ್ಕೆ ನೀರು ಕಳುಹಿಸುವ ಕೆರೆ?ಕುಂಟೆಗಳೇ ಇಲ್ಲವಾದ ಮೇಲೆ ಅಂತರ್ಜಲ ಮಟ್ಟ ಎಲ್ಲಿಂದ ಹೆಚ್ಚಾಗಬೇಕು?

ರಾಜ್ಯದ ಬಹುತೇಕ ಗ್ರಾಮ ಪಂಚಾಯಿತಿಗಳು ಕೊಳವೆಬಾವಿಗಳಿಂದ ನೀರೆತ್ತಿ ಪೂರೈಸಲು ವಿದ್ಯುತ್ ಬಿಲ್ಲಾಗಿ ತಮ್ಮ ವರಮಾನದ ಬಹುಪಾಲು ಮೊತ್ತ ಖರ್ಚು ಮಾಡುತ್ತವೆ. ಅದರ ಬದಲು ಕೆರೆಗಳ ಹೂಳು ಮೇಲೆತ್ತಿ, ಕಾಲುವೆಗಳನ್ನು ಸುಸ್ಥಿತಿಯಲ್ಲಿಟ್ಟು ನೀರನ್ನು ಸಂಗ್ರಹಿಸಬೇಕೆನ್ನುವ ತುರ್ತು ಯಾವ ಪಂಚಾಯಿತಿಯನ್ನೂ ಕಾಡಿಲ್ಲ.

ಜಲಾಶಯಗಳು ಭರ್ತಿಯಾಗಿದ್ದ ಸಂದರ್ಭದಲ್ಲಿ ಕೆರೆಗಳನ್ನು ತುಂಬಿಸುವತ್ತ ಸರ್ಕಾರ ಸಹ ಒಲವು ತೋರಿಲ್ಲ. ಹನಿ ನೀರಾವರಿಯಂತಹ ವೈಜ್ಞಾನಿಕ ವಿಧಾನಗಳು ಬಂದಿದ್ದರೂ ನಮ್ಮ ರೈತರು ಕೃಷಿ ಚಟುವಟಿಕೆ ಸಂದರ್ಭದಲ್ಲಿ ನೀರು ಪೋಲು ಮಾಡುವುದು ನಿಂತಿಲ್ಲ. ಸರ್ಕಾರದಿಂದ ಕೊರೆಸಿರುವ ಕೊಳವೆಬಾವಿಗಳಲ್ಲಿ ಮರುಪೂರಣ ಮಾಡುವ ವ್ಯವಸ್ಥೆ ಜಾರಿಗೆ ತಂದರೆ ದೊಡ್ಡ ಜಲಕ್ರಾಂತಿಯನ್ನೇ ಮಾಡಲು ಸಾಧ್ಯವಿದೆ.

ಆದರೆ, ಹೊಸ ಕೊಳವೆಬಾವಿಗಳನ್ನು ಕೊರೆಸಲು ಆಡಳಿತ ವ್ಯವಸ್ಥೆಗೆ 'ತುರ್ತು' ಸಂದರ್ಭಗಳು ಒದಗಿ ಬರುತ್ತವೆಯೇ ಹೊರತು, ಹಳೆಯವು ಏನಾದವು ಎಂಬುದನ್ನು ಪರಿಶೀಲಿಸಲು ಸಮಯವಿಲ್ಲ. ಮನೆಗಳಿಗೆ ಪೂರೈಕೆಯಾಗುವ ಶೇ 80ರಷ್ಟು ಪ್ರಮಾಣದ ನೀರು ಚರಂಡಿ ಪಾಲಾಗುತ್ತದೆ ಎಂಬ ಅಂದಾಜಿದೆ. ನಲ್ಲಿಗಳ ತೊಟ್ಟು ಈಗಿನ ಗಾತ್ರಕ್ಕಿಂತ ತುಸು ಚಿಕ್ಕದಾದರೂ ಭಾರಿ ಪ್ರಮಾಣದ ನೀರು ಉಳಿತಾಯ ಆಗುತ್ತದೆ.

ಆದೇಶ ಹೊರಡಿಸಿದಂತೆ ಸರ್ಕಾರ ನಾಟಕ ಆಡುವುದನ್ನು ಬಿಟ್ಟು ಆ ಏಜೆನ್ಸಿಗಳ ಜುಟ್ಟು ಹಿಡಿಯಬೇಕು. ಭವಿಷ್ಯದ ಗಂಡಾಂತರ ತಪ್ಪಿಸಲು ಜನರಲ್ಲಿ ಅರಿವು ಮೂಡಿಸುವ ಹಾಗೂ ಜಲ ಸಂರಕ್ಷಣೆಯಲ್ಲಿ ಅವರನ್ನು ತೊಡಗಿಸಿಕೊಳ್ಳುವ ಆಂದೋಲನ ನಡೆಸಬೇಕು. ಇಂತಹ ಕಾರ್ಯದಲ್ಲಿ ಕೈಜೋಡಿಸಿದರಷ್ಟೇ ತನಗೆ ಉಳಿಗಾಲವಿದೆ ಎಂಬುದನ್ನು ಜನಸಮುದಾಯವೂ ಅರಿಯಬೇಕು.

# ಪ್ರಕೃತಿ ತಾಯಿಯ ಬಗ್ಗೆ ಕಾಳಜಿ ಇಲ್ಲದಂತಾಗಿದೆ



ಇತ್ತೀಚಿನ ದಿನಗಳಲ್ಲಿ ಪ್ರಕೃತಿಯ ಬಗ್ಗೆ ಯಾರಿಗೂ ಸಹ ಕಾಳಜಿ ಇಲ್ಲದಂತಾಗಿದೆ. ಭಾರತೀಯ ನಾಗರಿಕತೆಯನ್ನು ಗಮನಿಸಿದಾಗ ಹರಪ್ಪ ಮತ್ತು ಸಿಂಧೂ ಬಯಲಿನ ನಾಗರಿಕತೆಯ ಸಂದರ್ಭದಲ್ಲಿಜನರು ಪ್ರಕೃತಿಯನ್ನು ಆರಾಧಿಸುತ್ತಿದ್ದರು- ಎಂಬುದು ಅಧ್ಯಯನದಲ್ಲಿ ತಿಳಿದು ಬಂದಿದೆ.ಅನಂತರ ಸೃಷ್ಠಿಯ ಮೂಲದ ಬಗ್ಗೆ ತಿಳಿಯುಲಾರಂಭಿಸಿದರು. ಜೀವ ಸಂಕುಲಕ್ಕೆ ಬುದ್ಧಿ ಜೀವಿಯಾದ ಮಾನವನು ಪ್ರಕೃತಿಗೆ ಆಕಾರಗಳನ್ನು ನೀಡಿ ಪೂಜಿಸಲಾರಂಭಿಸಿದ.ಆ ವಿಗ್ರಹಗಳಿಗೆ ವಾಹನಗಳಾಗಿ ಮತ್ತು ಸೇವಕನಾಗಿ ಪ್ರಾಣಿ ಮತ್ತು ಪಕ್ಷಿಗಳನ್ನು ಬಳಸಿಕೊಂಡರು. ಇದರ ಹಿನ್ನಲೆಗಳನ್ನು ಗಮನಿಸಿದಾಗ ಈ ಪ್ರಕೃತಿಯಲ್ಲಿ ಆ ಪ್ರಾಣಿಗಳಿಗೂ ಸಹ ಜೀವಿಸಲು ಅವಕಾಶವನ್ನುಕಲ್ಪಿಸಲಾಗಿದೆ.

ಪ್ರಸ್ತುತ ದಿನದಲ್ಲಿ ಮಾನವನೆಂಬ ಅತಿ ಬುದ್ಧಿವಂತ ಜೀವಿಯುತನಗೆ ಇಷ್ಟ ಬಂದ ಹಾಗೆ ಪ್ರಕೃತಿ ತಾಯಿಯನ್ನು ನೋವಿನಿಮದ ಮುಳುಗಿಸಿದ್ದಾನೆ. ಆದರೆ ಆ ತಾಯಿಯು ತಾಳ್ಮೆಯನ್ನು ಕಳೆದುಕೊಂಡಿಲ್ಲ. ಏಕೆಂದರೆ ಆ ಪ್ರಕೃತಿಗೆಕೊಟ್ಟಿರುವ ಸ್ಥಾನ ತಾಯಿಯ ಸ್ಥಾನ. ಇತ್ತೀಚಿನ ದಿನಗಳಲ್ಲಿ ಜೀವ ಸಂಕುಲದಲ್ಲಿ ಮನುಷ್ಯನು ಬದುಕಲು ಇತರ ಜೀವಸಂಕುಲ ಪ್ರಾಣಿ ಮತ್ತುಪಕ್ಷಿಗಳನ್ನು ನಾಶ ಮಾಡುತ್ತಿರುವುದನ್ನುಕಾಣಬಹುದು. ಅಷ್ಟೇ ಅಲ್ಲದೇ ಮನುಷ್ಯ ಮನುಷ್ಯ ನನ್ನೇ ನಾಶಗೊಳಿಸುತ್ತಿರುವುದನ್ನು ಗಮನಿಸಬಹುದು.

ವಾಯು ಮಾಲಿನ್ಯ, ಜಲ ಮಾಲಿನ್ಯ, ಶಬ್ಧ ಮಾಲಿನ್ಯ ಹೀಗೆ ಎಲ್ಲರಂಗದಲ್ಲಿಯೂತನ್ನ ಪ್ರಾಬಲ್ಯವನ್ನು ಮೆರೆಯುತ್ತಿದ್ದಾನೆ. ಅಭಿವೃದ್ಧಿಯ ಎಂಬ ಹೆಸರಿನಲ್ಲಿತನ್ನಅಭಿವೃದ್ಧಿ ಮಾತ್ರ ಪರಿಗಣಿಸಿ ಪ್ರಕೃತಿತಾಯಿಗೆ ಮೇಲಿಂದ ಮೇಲೆ ನೋವನ್ನು ನೀಡುತ್ತಿದ್ದಾನೆ. ಬೇಸಿಗೆ ಕಾಲದ 'ಲ್ಲಿಚರ್ಮವನ್ನುಕಪ್ಪಾಗಿಸಬಲ್ಲದ ೦. ಇದರಿಂದರಕ್ಷಿಸಲು ಅನೇಕ ಕ್ರೀಮ್‌ಗಳನ್ನು ಬಳಸುತ್ತಾರೆ. ಆದರೆಈ ಬೇಸಿಗೆ ಬಿಸಿಲಿನಲ್ಲೇ ಅನೇಕ ಮರ ಗಿಡಗಳು ಚಿಗುರುಒಡೆಯುತ್ತವೆ. ಈ ಬೇಸಿಗೆ ಬಿಸಿಲೆ ಆ ಸಸ್ಯ ಮರಗಳಿಗೆ ವರದಾನವಾಗಿದೆ.

ಅಭಿವೃದ್ಧಿ ಹೆಸರಿನಲ್ಲಿ ನಾಶವಾಗುತ್ತಿರುವಒಂದು ಮರವನ್ನು ಕತ್ತರಿಸಿದರೆ ಎರಡು ಮರಗಳನ್ನು ಕಡ್ಡಾಯವಾಗಿ ಬೆಳೆಸಬೇಕು, ಹಾಗೂ ಪ್ರತಿ ಮನೆಯಲ್ಲಿಯೂ ಸಸ್ಯಗಳನ್ನು ಬೆಳೆಸುವುದರಿಂದ ಶಬ್ಧ ಮತ್ತು ವಾಯು ಮಾಲಿನ್ಯ ನಿಯಂತ್ರಿಸಬಹುದು. ಇಂತಹ ವಿಚಾರಗಳನ್ನು ವಿದ್ಯಾವಂತರು, ವಿಚಾರವಂತರು ಸರ್ಕಾರದ ಗಮನಕ್ಕೆ ತಂದುದೇಶ ಪ್ರತಿ ಹಳ್ಳಿಗಳಿಗೂ ಪರಿಸರಜಾಗೃತಿಯನ್ನು ಮೂಡಿಸಿದಾಗ ನಮ್ಮ ರಕ್ಷಣೆಯ ಜೊತೆಗೆ ಪರಿಸರದರಕ್ಷಣೆಆಗುತ್ತದೆ.

**"ಈಜೀವ ಸಂಕುಲದರಕ್ಷಣೆ ನಮ್ಮೆಲ್ಲರ ಹೊಣೆ".**

**–ಕೃಷ್ಣ.ಬಿ**

# ಮಿಂಚಿ ಮರೆಯಾದ ಅಮರ ಜೀವಿ–ಸ್ವಾಮಿ ವಿವೇಕಾನಂದ

ಸೂರ್ಯನಂತೆ ಪ್ರಕಾಶಮಾನವಾಗಿ ಕೋಲ್ಮಿಂಚುವಿನಂತೆ ಮಿಂಚಿ ಮರೆಯಾದ ಅಮರ ಜೀವಿಗೆ ನಮನ ಸಲ್ಲಿಸುತ್ತಾ ಲೇಖನ ಮುಂದುವರೆಸಲು ಇಚ್ಛಿಸುತ್ತೇನೆ. ಇವತ್ತು ನಾವು ಬದುಕುತ್ತಿರುವ ಪ್ರಪಂಚವನ್ನು, ನಮ್ಮ ಜೀವನ ನಮ್ಮ ಆಶೋತ್ತರಗಳನ್ನು ರೂಪಿಸಿದವರು ಚರಿತ್ರೆಯ ಮಹಾರಾಜರಲ್ಲ. ಧರ್ಮ, ತತ್ವಶಾಸ್ತ್ರ, ವಿಜ್ಞಾನ, ಅರ್ಥಶಾಸ್ತ್ರ, ರಾಜಕೀಯ, ಸಮಾಜ ಸುಧಾರಣೆ ಮೊದಲಾದ ಕ್ಷೇತ್ರಗಳಲ್ಲಿ ಕಾರ್ಯ ಮಾಡಿರುವ ಕೆಲವೇ ಕೆಲವು ಮಂದಿ ಮಹಾಮೇಧಾವಿಗಳು. ಅಂಥವರಲ್ಲಿ ಸ್ವಾಮಿ ವಿವೇಕಾನಂದರೂ ಒಬ್ಬರು.



ಸ್ವಾಮಿ ವಿವೇಕಾನಂದರು 1863 ಜನವರಿ 12ರಲ್ಲಿ ಕಲತ್ತಾದಲ್ಲಿ ಜನಿಸಿದರು. ತಂದೆ ವಿಶ್ವನಾಥ ದತ್ತ; ತಾಯಿ ಭುವನೇಶ್ವರಿ ದೇವಿ. ಸ್ವಾಮಿ ವಿವೇಕಾನಂದರ ಮೊದಲ ಹೆಸರು ನರೇಂದ್ರನಾಥ ದತ್ತ. ಚಿಕ್ಕಂದಿನಲ್ಲಿ ಧೈರ್ಯಶಾಲಿಯೂ ಮೇಧಾವಿಯೂ ಆದ ನರೇಂದ್ರನು ಪರಮಹಂಸರ ಕೃಪೆಯಿಂದ ಸ್ವಾಮಿ ವಿವೇಕಾನಂದರಾದರು. ಸ್ವಾಮಿ ವಿವೇಕಾನಂದರು ಸಮಸ್ತ ವಿಶ್ವವನ್ನೂ ಪ್ರೀತಿಸುವ ವಿಶಾಲ ಹೃದಯವಿತ್ತು. ಅವರಿಗೆ ಜಾತಿ ಭೇದದ ಭಾವನೆ ಇರಲಿಲ್ಲ. ದೇವರ ಮಕ್ಕಳೆಲ್ಲ ಒಂದೇ ಕುಲದವರೆಂಬ ಭಾವನೆ ಅವರದಾಗಿತ್ತು. ಮುಸಲ್ಮಾನರಾಗಲಿ, ಕ್ರೈಸ್ತರಾಗಲಿ, ಚಮ್ಮಾರರಾಗಲಿ, ಹರಿಜನರಾಗಲಿ ಎಲ್ಲ ಸಮಾನರು ಎಂದು ಸಾರಿದರು. ಸ್ವಾಮಿ ವಿವೇಕಾನಂದರು ಭಾರತದ ಜನತೆಯ ಜೀವನವನ್ನು ಪ್ರತ್ಯಕ್ಷ ನೋಡಲೆಂದು ಯಾತ್ರೆ ಹೊರಟರು. ಸಮಸ್ತ ಭರತ ಖಂಡದಲ್ಲಿ ಸಂಚರಿಸುವುದೇ ಅವರ ಗುರಿಯಾಗಿತ್ತು. ಸ್ವಾಮಿ ವಿವೇಕಾನಂದರ ಅಪೂರ್ವ ತೇಜಸ್ಸನ್ನು ಮತ್ತು ಹೃದಯವಂತಿಕೆಯ ಮನಸ್ಸನ್ನು ಗಮನಿಸಿದ ಅನೇಕರು ಅವರನ್ನು ಅಮೇರಿಕಾದ ಚಿಕಾಗೋ ನಗರದಲ್ಲಿ ನಡೆಯುವ ಸರ್ವಧರ್ಮ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಹೋಗಬೇಕೆಂದು ಕೇಳಿಕೊಂಡರು.

ಸ್ವಾಮಿ ವಿವೇಕಾನಂದರ ಸರ್ವಧರ್ಮ ಸಾಮರಸ್ಯವನ್ನು ಸಾರುತ್ತಾ, ಮಾನವನು ಅಮೃತಪುತ್ರನೆಂದು ಸಾರಿದರು. ಈ ನುಡಿಯಿಂದಲೇ ಸ್ವಾಮಿ ವಿವೇಕಾನಂದರ ಕೀರ್ತಿ ಹಿಮ್ಮಡಿಯಾಯಿತು. ತಮಗೆ ಬಂದ ಕೀರ್ತಿ ಗೌರವವನ್ನು ರಾಮಕೃಷ್ಣರ ಹೆಸರಿನಲ್ಲಿ ಸ್ವೀಕರಿಸಿದರು. ಹಾಗೆಯೇ ಸ್ವಾಮಿ ವಿವೇಕಾನಂದರು ತಮ್ಮ ಸಿಂಹಕಂಠದಿಂದ ಭಾರತೀಯರನ್ನು ಎಚ್ಚರಿಸಿದ್ದರು. ವಿಶ್ವ ಮಾನವತೆಯನ್ನು ಸಾರಿದರು.

"ಬಡವರಿಗಾಗಿ ಮನಕರಗಿ ಅವರಿಗಾಗಿ ಸೇವೆ ಮಾಡುವವನು ಮಹಾತ್ಮ"

"ಪಾಶ್ಚಿಮಾತ್ಯ ಜೀವನದ ರೀತಿ, ಭಾರತದ ಸನಾತನ ಧರ್ಮದೃಷ್ಠಿ ಇವೆರಡರ ಸಮ್ಮಿಲನದಿಂದಲೇ ಭಾರತದ ಉದ್ಧಾರ"

ಇಂತಹ ನುಡಿಗಳಿಂದ ಜನತೆಯನ್ನು ಎಚ್ಚರಿಸಿ ಮಾನವ ಕಲ್ಯಾಣಕ್ಕಾಗಿ ದೇವದೂತನಾಗಿ ಬಂದ ಸ್ವಾಮಿ ವಿವೇಕಾನಂದರು 1902ನೇ ಜುಲೈ 4ರಂದು ಇಹಲೋಕ ತ್ಯಜಿಸಿದರು.

**–ಮಲ್ಲಿಕಾರ್ಜುನ್ ಬಿ ಆರ್**

# ಓದುಗರ ಪತ್ರ

## ಪಾರ್ಕಿಂಗ್ ಅವ್ಯವಸ್ಥೆ

ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವದ ಸಂಭ್ರಮಾಚರಣೆ ಹೊತ್ತಿನಲ್ಲಿದ್ದರು ಇಲ್ಲಿನ ಪಾರ್ಕಿಂಗ್ ವ್ಯವಸ್ಥೆ ಸುಧಾರಣೆಗೊಳಲ್ಲಿಲ್ಲ. ಇಲ್ಲಿ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ವರ್ಗ ತಮ್ಮ ವಾಹನಗಳನ್ನು ಅಡ್ಡಾ–ದಿಡ್ಡಿ ನಿಲ್ಲಿಸುವುದ್ದರಿಂದ ಪಾದಚಾರಿಗಳಿಗೆ ತುಂಬಾ ತೊಂದರೆ ಆಗುವುದರೊಂದಿಗೆ ಕ್ಯಾಂಪಸ್ ಸೌಂದರ್ಯ ಹಾಗೂ ಪರಿಸರ ನಾಶವಾಗುತ್ತಿದೆ. ಪ್ರಮುಖವಾಗಿ ಕೇಂದ್ರ ಗ್ರಂಥಾಲಯ ಮುಂಭಾಗ, ರೌಂಡ್ ಕ್ಯಾಟಿನ್ ಸುತ್ತಲು, ಬಸ್ ನಿಲ್ದಾಣ ಹತ್ತಿರ ಪಾರ್ಕಿಂಗ್ ತೀರ ಅದಗೆಡುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು.

## ನೀರಿನ ಸಮಸ್ಯೆ ಬಗೆಹರಿಸಿ

ಭಾರತದ ಪ್ರಮುಖ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಮೈಸೂರಿನ ವಿಶ್ವವಿದ್ಯಾನಿಲಯ ಕೂಡ ಒಂದು. ಮಾನಸ ಗಂಗೋತ್ರಿಯು ವಿಶ್ವವಿದ್ಯಾನಿಲಯದಷ್ಟೆ ಹೆಸರುವಾಸಿ. ಆದರೆ ಇಲ್ಲಿ ನೀರಿನ ಸಮಸ್ಯೆ ತಲದೂಗಿದೆ. ಪಕ್ಕದಲ್ಲೆ ಕುಕ್ಕರಳ್ಳಿ ಕೆರೆ ಇದ್ದರು ಶೌಚಾಲಯಗಳಲ್ಲಿ ನೀರು ಬರುತಿಲ್ಲ ಗೊತ್ತಿಲ್ಲದೆ ಯಾರಾದರು ಶೌಚಕ್ಕ ಹೋದರೆ ಪರದಾಡುವುದಂತು ಖಂಡಿತ. ಶೌಚಕ್ಕೆ ನೀರಿಲ್ಲ ಸರಿ ಎನ್ನಬಹುದು. ಆದರೆ ಡಿಪಾರ್ಟ್‌ಮೆಂಟ್‌ಗಳಲ್ಲೆ ಕುಡಿಯಲು ನೀರಿಲ್ಲ. ಸಂಬಂಧ ಪಟ್ಟವರು ಕೂಡಲೆ ಸಮಸ್ಯೆ ಬಗೆಹರಿಸಬೇಕೆಂದು ವಿನಂತಿ.

# ಲಕ್ಷಾಂತರ ಪುಸ್ತಕಗಳ ಖಜಾನೆ ಅಂಕೇಗೌಡರ ಪುಸ್ತಕ ಮನೆ

ಪುಸ್ತಕ ಪ್ರತಿಯೊಬ್ಬ ವ್ಯಕ್ತಿಗೂ ನಿಜವಾದ ಸ್ನೇಹಿತ. ಅಷ್ಟೇ ಅಲ್ಲ, ಜ್ಞಾನದ ಮೂಲವೂ ಹೌದು. ಪುಸ್ತಕ ಜೊತೆಗಿದ್ದರೆ ಸಾಕು ಅನೇಕರಿಗೆ ಸಮಯ ಕಳೆಯುವುದೇ ತಿಳಿಯುವುದಿಲ್ಲ. ಮನುಷ್ಯನ ಜ್ಞಾನ ವಿಕಾಸಕ್ಕೆ ನೂರಾರು ವರ್ಷಗಳಿಂದ ಸಹಕರಿಸುತ್ತಾ ಬಂದಿರುವ ಈ ಪುಸ್ತಕವೆಂಬ ಸ್ನೇಹಿತನಿಗೆ ಈಗ ಎಷ್ಟು ಮಂದಿ ಸ್ನೇಹ ಹಸ್ತ ಚಾಚುತ್ತಿದ್ದಾರೆ..? ಆಧುನಿಕತೆಯ ಪ್ರವಾಹದಲ್ಲಿ ಸಿಲುಕಿ ಈ ಸ್ನೇಹಿತ ನಲುಗುತ್ತಿದ್ದಾನೆ. ಆದರೆ, ಇಂತಹ ಸ್ನೇಹಿತನನ್ನು ಬದುಕುಳಿಸಲು ಅಸಂಖ್ಯಾತ ಮಂದಿ ಈಗಲೂ ಹೋರಾಟ ನಡೆಸುತ್ತಿದ್ದಾರೆ. ಇಂತಹವರ ಸಾಲಿನಲ್ಲಿ ಅಂಕೇಗೌಡ ಎಂಬ ಪುಸ್ತಕ ವ್ಯಾಮೋಹಿ ಮುಂಚೂಣಿಯಲ್ಲಿ ನಿಲ್ಲುತ್ತಾರೆ.

ಇವರನ್ನು ಒಬ್ಬ ವ್ಯಕ್ತಿ ಎನ್ನುವುದಕ್ಕಿಂತ ಒಂದು ಸಂಸ್ಥೆ ಎನ್ನಬಹುದೇನೋ. ವಿಡಂಬನೆ ಮುಖವಾಡದ ಜೀವನ ನಡೆಸುತ್ತಾ, ಸಣ್ಣ ಕೆಲಸ ಮಾಡಿ ಸರ್ಕಾರ, ಪ್ರಶಸ್ತಿ ಸವಲತ್ತುಗಳಿಗೆ ಕಣ್ಣು ಹಾಯಿಸುವ ಈ ಸಮಾಜದಲ್ಲಿ, ಹುಟ್ಟಿದ ನೆಲ, ಜಲ, ಭಾಷೆ ಬಗೆಗಿನ ಅಭಿಮಾನದಿಂದ ಯಾವುದೇ ಪ್ರತಿಫಲಾಕ್ಷೆಯಿಲ್ಲದೆ ಜವಾಬ್ದಾರಿಯುತ ನಾಗರಿಕನಾಗಿ ಸದ್ದಿಲ್ಲದೆ, ಎಲೆಮರೆ ಕಾಯಿಯಂತೆ ತನ್ನ ಪಾಡಿಗೆ ತಾನು ಒಂದು ಸಂಸ್ಥೆ ಮಾಡುವಷ್ಟು ಕಾರ್ಯವನ್ನು ಒಬ್ಬರೇ ಮಾಡುತ್ತಿದ್ದಾರೆ. ಇದು ಆಶ್ಚರ್ಯವೆನಿಸಿದರೂ ಸತ್ಯ...

ಮಂಡ್ಯ ಜಿಲ್ಲೆಯ ಪಾಂಡವಪುರದ ಮೈಸೂರು-ನಾಗಮಂಗಲ ಮುಖ್ಯರಸ್ತೆಯ ಹರಳಹಳ್ಳಿ(ವಿವಿ ನಗರ)ಯಲ್ಲಿ ಸಂಚರಿಸಬೇಕಾದರೆ ಇಲ್ಲಿನ ಮುಖ್ಯ ರಸ್ತೆಯಲ್ಲೇ 'ಅಂಕೇಗೌಡ ಪುಸ್ತಕ ಮನೆ' ಎಂಬ ಗ್ರಂಥಾಲಯವೊಂದು ಕಾಣುತ್ತದೆ. ಈ ಗ್ರಂಥಾಲಯದೊಳಗೊಮ್ಮೆ ಹೋದರೆ ನೀವು ಮೂರ್ಛೆ ಬೀಳುವುದು ಖಂಡಿತ...!! ಕಾರಣ, ಇಲ್ಲಿದೆ ಲಕ್ಷಾಂತರ ಪುಸ್ತಕಗಳು...

ಉತ್ತಮ ಪುಸ್ತಕಗಳು ಜ್ಞಾನದ ಖಜಾನೆ. ಆಸಕ್ತಿ ಎಂಬ ಹಸ್ತದಲ್ಲಿ ಕುತೂಹಲದ ಕೀಲಿಕೈಯಿಂದ ಪುಸ್ತಕ ಖಜಾನೆಯ ಬಾಗಿಲು ತೆರೆದಾಗ ಮುತ್ತು, ರತ್ನ, ವಜ್ರ, ವೈಡೂರ್ಯಗಳು ಹೊಳೆಯುತ್ತ ಮನ ಸೆಳೆಯುತ್ತವೆ. ಅಂತಹ ಪುಸ್ತಕಗಳ ಬೃಹತ್ ಸಾಗರವೇ ಇವರಲ್ಲಿದೆ.




ಕನ್ನಡ, ಇಂಗ್ಲೀಷ್, ಸಂಸ್ಕೃತ, ಹಿಂದಿ, ಉರ್ದು, ಮರಾಠಿ ಸೇರಿದಂತೆ ಭಾರತದ ಬಹುತೇಕ ಭಾಷೆಗಳ ಪುಸ್ತಕಗಳ ಸಂಗ್ರಹವಿದೆ. ವಿಶ್ವಕೋಶಗಳು, ನಿಘಂಟು, ಸ್ಮರಣ ಸಂಪುಟ, ಅಭಿನಂದನ ಗ್ರಂಥ, ಜೀವನ ಚರಿತ್ರೆ, ವ್ಯಕ್ತಿ ಚಿತ್ರಗಳು, ಆತ್ಮಕಥನ, ಅಂಕಣ ಬರಹಗಳು, ಸಂಪಾದನೆ, ವಿಚಾರ ಸಾಹಿತ್ಯ, ಸಾಹಿತ್ಯ, ಚರಿತ್ರೆ, ಹಿಂದೂ ಧರ್ಮ, ವೇದ, ಉಪನಿಷತ್, ಪುರಾಣಗಳು, ಧಾರ್ಮಿಕ ಗ್ರಂಥಗಳು, ಛಂದಸ್ಸು, ವ್ಯಾಕರಣ, ಲಕ್ಷಣಶಾಸ್ತ್ರ, ಭಾಷಾ ವಿಜ್ಞಾನ,. ಕಾವ್ಯ, ನಾಟಕ, ಕಾದಂಬರಿ, ಪತ್ರ ಸಾಹಿತ್ಯ, ವಚನ ಸಾಹಿತ್ಯ, ಗಿನ್ನಿಸ್ ಪುಸ್ತಕಗಳು.....ಹೀಗೆ ಹೇಳಿದಷ್ಟು ಮುಗಿಯದಷ್ಟು ಸಾಹಿತ್ಯ ಪ್ರಕಾರಗಳ ಸಮೃದ್ಧ ಗಣಿ ಇದು.....

## 4 ಲಕ್ಷ ಪುಸ್ತಕಗಳು

ಬಹುದೂರದ ನೆಲೆಯಿಂದ ಪುಸ್ತಕಾಲಯದ ಕೌತುಕವನ್ನು ಕಾಣಲು ಬಂದು ಒಳಹೊಕ್ಕವರಿಗೆ ಕ್ಷಣಕಾಲ ದಿಗ್ಭ್ರಮೆಯಾಗುವುದು ಖಂಡಿತ ಸತ್ಯ. ಏಕೆಂದರೆ ಇಲ್ಲಿ ಎಲ್ಲಿ ಬಗೆಯ ಲಕ್ಷಾತರ ಪುಸ್ತಕಗಳಿವೆ. ಸಮಾಜ ಸುಧಾರಕರ ಗ್ರಂಥಗಳ ವರ್ಣ, ವರ್ಗ, ಪಂಥ, ಪಂಗಡಗಳ ಪ್ರಕಾರಗಳು ಸ್ವಾತಂತ್ರ್ಯ ಸಂಗ್ರಾಮ ರಾಷ್ಟ್ರಪಿತನ ಜೀವನಗಾಥೆ, ಚಳುವಳಿಗಳು, ವಿಶ್ವದ ಮಹಾನ್ ಕ್ರಾಂತಿಗಳು, ವಿಶ್ವದ ಎಲ್ಲಾ ಜ್ಞಾನ ವಿಜ್ಞಾನ ವಿಚಾರಗಳು, ವೈದ್ಯಕೀಯ ಕ್ಷೇತ್ರದ ಅಚ್ಚರಿಗಳು, ಆ ಧುನಿಕತೆಯ ಗರ್ಭದಿಂದ ಫಲಿತಗೊಂಡ ಮಾಹಿತಿಗಳ ಹೊತ್ತಿಗೆಗಳು, ಸೌರವ್ಯೂಹದಿಂದ ಹಿಡಿದು ಪ್ರಾಕೃತಿಕ ಹಾಗೂ ಭೌಗೋಳಿಕ ಮಾಹಿತಿಗಳ ಕ್ರೀಡೆ, ಸಾಹಿತ್ಯ, ಕಲೆ ಶಿಲ್ಪಕಲೆ, ವಾಸ್ತುಶಿಲ್ಪ, ಜ್ಯೋತಿಷ್ಯ ನಾಟ್ಯ, ನಾಟಕ ಜನಪದ ಯಕ್ಷಗಾನ, ರಂಗಭೂಮಿ ಪಾಕಶಾಸ್ತ್ರ, ಆತ್ಮಚರಿತ್ರೆ , ಪ್ರವಾಸ ಕಥನ, ಅನುವಾದ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರ ಕೃತಿಗಳು ಜ್ಞಾನಪೀಠ, ನೊಬೆಲ್ ಪ್ರಶಸ್ತಿ ಪಡೆದ ಉತ್ಕೃಷ್ಟ ಗ್ರಂಥಗಳು, ಕಾನೂನು ನಿಘಂಟು, ಭಾಷಾ ಚರಿತ್ರೆ ಮತ್ತು ಸುಭಾಷಿತಗಳು ಹಾಗೂ ತಮಿಳು, ತೆಲುಗು, ಹಿಂದಿ ಕೊಡವ ಉರ್ದು ಇತರೆ ಭಾಷೆಗಳ ಶ್ರೇಷ್ಠ ಗ್ರಂಥಗಳು, ಫ್ರೆಂಚ್ ಸಾಹಿತ್ಯ ಆಂಗ್ಲಭಾಷೆಯ ಷೆಲ್ಲಿ, ವರ್ಡ್ಸ್‌ವರ್ತ್, ಮಿಲ್ಟನ್, ಶೇಕ್ಸ್‌ಪಿಯರ್ ಮುಂತಾದ ಎಲ್ಲಾ ಸಾಹಿತಿಗಳ ಸರ್ವಶ್ರೇಷ್ಠ ಕೃತಿಗಳು..........

ಹೀಗೆ ಪಟ್ಟಿ ಮಾಡುತ್ತಾ ಹೋದರೆ ಮುಗಿಯದೇ ಸಾಗುವ ಪಟ್ಟಿಯ ಜೊತೆಗೆ ಪ್ರಾಚೀನ ನಾಣ್ಯಗಳು, ದೇಶ ವಿದೇಶಗಳ ಬಹುಬಗೆಯ ನೋಟುಗಳು, 70 ರಾಷ್ಟ್ರಗಳ ವೈವಿಧ್ಯಮಯ ಹತ್ತು ಸಾವಿರಕ್ಕೂ ಹೆಚ್ಚು ಅಂಚೆ ಚೀಟಿಗಳು, ಬಹುಬಗೆಯ ಲಗ್ನಪತ್ರಿಕೆಗಳು, ಸುಮಾರು 180 ರಾಷ್ಟ್ರಗಳ ರಾಷ್ಟ್ರೀಯ ಭೌಗೋಳಿಕ ಭೂಪಟಗಳು ನಿಮ್ಮ ಕಣ್ಣಮುಂದೆ ಅನಾವರಣಗೊಂಡು ನೀವು ವಿಶ್ವಶ್ರೇಷ್ಠ ಪ್ರಾಚೀನ ನಳದಾ ವಿಶ್ವವಿದ್ಯಾನಿಲಯದಲ್ಲಿರುವಂತೆ ಭಾಸವಾಗುತ್ತದೆ. ವಿಶೇಷವೆಂದರೆ, ಈ ಗ್ರಂಥಾಲಯದಲ್ಲಿ ಯಾವುದೇ ಸದಸ್ಯತ್ವದ ಅವಶ್ಯಕತೆ ಇಲ್ಲ. ಯಾರೇ ಬಂದರೂ ಉಚಿತವಾಗಿ ಪುಸ್ತಕ ಓದಲು ಅವಕಾಶವಿದೆ.

## ಏನಂತ ಅದ್ಬುತ ವಿಶೇಷ ಪುಸ್ತಕಗಳು?

2500 ಬಗೆಯ ರಾಮಾಯಾಣ, ಭಗವದ್ಗೀತೆ, ಮಹಾಭಾರತ ಪುಸ್ತಕಗಳು ಇವರಲ್ಲಿವೆ.. ಇನ್ನು ಇಲ್ಲಿರುವ ವ್ಯೋವವ್ಯೋಮ ಮಹಾಛಂದಸ್ಸಿನ ಸಂಕೀರ್ಣ ಗಪದ್ಯ ಹಾಡುಗಳ ಪುಸ್ತಕದಲ್ಲಿ ಎಲ್ಲೂ ವಿರಾಮ ಚಿಹ್ನೆಯಾಗಲೀ, ಫುಲ್‌ಸ್ಟಾಪ್ ಆಗಲೀ ಇಲ್ಲದಿರುವುದು ವಿಶೇಷ.. ಇದಲ್ಲದೆ, ಗಾಂಧೀಜಿ ಕುರಿತು ಬರೋಬ್ಬರಿ 2500 ಪುಸ್ತಕಗಳು ಇವರ ಬತ್ತಳಿಕೆಯಲ್ಲಿವೆ.

## ಸಮಾಜದ ಸಹಕಾರ..?

**ಅಂಕೇಗೌಡರ ಈ ಪುಸ್ತಕ ಮನೆಯನ್ನು ನೋಡಿದವರಿಗೆ ಇದು ಕೇವಲ ಒಬ್ಬ ವ್ಯಕ್ತಿಯಿಂದ ಸಾಧ್ಯವೇ ಎಂಬ ಅನುಮಾನ ಖಂಡಿತ ಮೂಡುತ್ತದೆ. ಆದರೆ, ಅದು ಸತ್ಯ. ಅಂಕೇಗೌಡರು ಗ್ರಂಥಾಲಯವನ್ನು ನಿರ್ಮಿಸಿರುವುದು ಸಮಾಜದ ಹೆಚ್ಚಿನ ಸಹಕಾರವಿಲ್ಲದೆ.. "ಗ್ರಂಥಾಲಯ ನಾನು ಇಚ್ಛೆಪಟ್ಟು ರೂಪಿಸಿದ ಕನಸು.. ಸಮಾಜದಿಂದ ಸಹಾಯವನ್ನು ನಿರೀಕ್ಷಿಸುವುದರ ಬದಲು ನನ್ನ ಕಾರ್ಯನಿರ್ವಹಿಸುವುದರಲ್ಲೇ ಹೆಚ್ಚು ತೃಪ್ತಿ. ..ಜನ ಅವರಾಗಿಯೇ ಇಷ್ಟಪಟ್ಟು ಸಹಕರಿಸಿದಲ್ಲಿ ಅದು ಖುಷಿಯ ವಿಚಾರವೇ. ಪತ್ನಿಯ ಬೆಂಬಲವಂತೂ ಸದಾ ಇದ್ದೇ ಇದೆ... ಈ ಗ್ರಂಥಾಲಯದಲ್ಲಿ ಅಭ್ಯಸಿಸಿದ ಅನೇಕ ಮಂದಿ ಇಂದು ಉನ್ನತ ಸ್ಥಾನಗಳಿಗೇರಿದ್ದಾರೆ. ಪಿಹೆಚ್‌ಡಿ ಪದವಿ ಪಡೆದಿದ್ದಾರೆ. ಆ ಆತ್ಮತೃಪ್ತಿ ಖುಷಿ ನೀಡುತ್ತದೆ" ಎನ್ನುವ ಮನೋಭಾವ ಅಂಕೇಗೌಡರದು......**

## 3ಡಿ ಪುಸ್ತಕವೂ ಉಂಟೂ

ಈ ಪುಸ್ತಕ ಮನೆಯ ವಿಭಿನ್ನತೆಯೆಂದರೆ ತೀರಾ ವಿಭಿನ್ನವೆನಿಸುವ ಪುಸ್ತಕಗಳು.. ಇಲ್ಲಿ ಓದಲು ಮಾತ್ರವಲ್ಲದೆ, ನೋಡಲು ಅದ್ಭುತವೆನಿಸುವ ಪುಸ್ತಕಗಳು ಸಹ ಇವೆ. ಆ ಪೈಕಿ 3ಡಿ ಪುಸ್ತಕವೂ ಒಂದು. ವೀಕ್ಷಿಸಲು ಕನ್ನಡಕವೂ ಸಹ ಲಭ್ಯ...

## ಆಸಕ್ತಿ ಶುರುವಾಗಿದ್ದು ಹೀಗೆ...

ಅಂಕೇಗೌಡರ ಪುಸ್ತಕಾಸಕ್ತಿ ಶುರುವಾದದ್ದು ಚಿಕ್ಕಂದಿನಿಂದ. ಶಾಲೆಯಲ್ಲಿ. ಓದಲು ಪುಸ್ತಕಗಳೇನೋ ದೊರೆಯುತ್ತಿದ್ದವು.. ಆದರೆ, ಕೊಂಡ್ಯೊಯಲು ಅವಕಾಶವಿರಲಿಲ್ಲ. ನಂತರ ಕಾಲೇಜು ದಿನಗಳಲ್ಲಿ ಕೆ. ಅನಂತರಾಮು ಎಂಬ ಶಿಕ್ಷಕರು ನೀಡಿದ ಪ್ರೇರಣೆಯಿಂದ ಪುಸ್ತಕಗಳ ಮೇಲೆ ವಿಶೇಷ ಪ್ರೀತಿ ಉಂಟಾಯಿತು. ಏನನ್ನಾದರೂ ಸಾಧಿಸಬೇಕೆಂಬ ಛಲದಿಂದ ಪುಸ್ತಕಗಳನ್ನು ಸಂಗ್ರಹಿಸುವ ಆಸಕ್ತಿ ಬೆಳಸಿಕೊಂಡೆ ಎಂದು ನೆನೆಯುತ್ತಾರೆ ಅಂಕೇಗೌಡರು. ನಂತರ ಆಸಕ್ತಿ ನಂತರ ಹವ್ಯಾಸವಾಗಿ ಮಾರ್ಪಾಡಾಗಿ ಇವರು ಕಳೆದ 35 ವರ್ಷಗಳಿಂದ ಸಂಗ್ರಹಿಸಿರುವ ಪುಸ್ತಕಗಳ ಸಂಖ್ಯೆ ಈಗ 4 ಲಕ್ಷವನ್ನು ಮೀರಿದೆ.. ಕರ್ನಾಟಕ ಸೇರಿದಂತೆ ದೇಶದ ವಿವಿಧೆಡೆ ನಡೆಯುವ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿ ಪುಸ್ತಕಗಳನ್ನು ಸಂಗ್ರಹಿಸಿದ್ದಾರೆ. ಅಲ್ಲದೆ, ತಮ್ಮ ಸಾವಿರಾರು ಪುಸ್ತಕಗಳನ್ನು ಪ್ರದರ್ಶನಕ್ಕಿರಿಸಿ ಅಚ್ಚರಿಗೊಳಿಸಿದ್ದಾರೆ. ಸತತ 35 ವರ್ಷಗಳ ಪರಿಶ್ರಮ ಈಗ ಹೆಮ್ಮರವಾಗಿ ರೂಪುಗೊಂಡಿದೆ...

## ಶೇ 80ರಷ್ಟು ಸಂಬಳವೂ ಇದಕ್ಕೆ, ಪಿಎಫ್ ಹಣವೂ ಸಹ ಪುಸ್ತಕಕ್ಕೆ...

ಅಂಕೇಗೌಡರು ಸಕ್ಕರೆ ಕಾರ್ಖಾನೆಯಲ್ಲಿ ಕರ್ತವ್ಯದಲ್ಲಿ ವಿಶೇಷ ವೇಳಾಧಿಕಾರಿಯಾಗಿ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಶೇ 80 ರಷ್ಟು ಸಂಬಳವನ್ನು ಪುಸ್ತಕ ಸಂಗ್ರಹಣೆಗೆ ವಿನಿಯೋಗಿಸುತ್ತಿದ್ದರು. ಸತತ 35 ವರ್ಷಗಳ ಸೇವೆಯ ನಂತರ ನಿವೃತ್ತಿಯಿಂದ ಬಂದ ಪಿಎಫ್ ಹಣ, ಎಲ್‌ಐಸಿ ಏಜೆಂಟ್ ಆಗಿ ಸಂಪಾದಿಸಿ 18 ಲಕ್ಷ ರೂ ಮಾತ್ರವಲ್ಲದೆ, ನಿವೇಶನ ಮಾರಿ ಬಂದ ಹಣವನ್ನು ಪುಸ್ತಕಗಳಿಗೆ ಉಪಯೋಗಿಸಿದ್ದಾರೆ.

**–ಮೇಘನ ಎಚ್ ಎನ್**

# ಪಡ್ಡೆ ಹುಡುಗರ ಜೀವನ ಗಾಥೆ ಕಿರಿಕ್ ಪಾರ್ಟಿ




ವಯೋಮಾನ ಸಹಜವಾಗಿ ಕಳೆದುಕೊಳ್ಳುವ ಪ್ರಾಯ ಗೀಳಾಗಿ ಕಾಡುತ್ತದೆ. ಆ ಹುಡುಗಾಟದ ಗೀಳು ಒಬ್ಬನನ್ನು ಹುಡುಕಾಟಕ್ಕೆ ಹಚ್ಚಬಹುದು. ಆತ್ಮೀಯರ ಮೂಲಕ ಆ ಹುಡುಕಾಟ ಸಾಧ್ಯವಾಗಬಹುದು. ಕೆಲವೊಮ್ಮೆ ಕಲೆ ಕೂಡ ಆ ಹುಡುಕಾಟದ ಹಂಬಲವನ್ನು ಹೆಚ್ಚಿಸಬಹುದು. ಸ್ವತಃ ಕಲೆಯಲ್ಲಿ ತೊಡಗಿಸಿಕೊಳ್ಳುವುದರ ಮೂಲಕವೂ ಅಥವಾ ಕಲೆಯನ್ನು ಆರಾಧಿಸುವ ಮೂಲಕವೂ. ಬಾಲ್ಯ–ಪ್ರಾಯವನ್ನು ನೆನಪಿಸಲು ಸಿನೆಮಾ ಸಶಕ್ತ ಮಾಧ್ಯಮವಂತೂ ಹೌದು. ಇಂತಹ ಕಾಲೇಜು ಹುಡುಗಾಟವನ್ನು ಕಟ್ಟಿಕೊಡುವ ಭರವಸೆ ಮೂಡಿಸಿದ್ದ ರಕ್ಷಿತ್ ಶೆಟ್ಟಿ ಅಭಿನಯದ 'ಕಿರಿಕ್ ಪಾರ್ಟಿ' ಇಂದು ಬಿಡುಗಡೆಯಾಗಿದೆ. ಇದಕ್ಕೆ ಪ್ರೇಕ್ಷಕನ ಜೊತೆ ಬೆಸೆದುಕೊಳ್ಳಲು ಹೇಗೆ ಸಾಧ್ಯವಾಗಿದೆ?

ಕರ್ಣ (ರಕ್ಷಿತ್ ಶೆಟ್ಟಿ) ಕಾಲೇಜಿನ ಕೊನೆಯ ಬೆಂಚಿನ ಎಂಜಿನಿಯರಿಂಗ್ ವಿದ್ಯಾರ್ಥಿ. ತರ್ಲೆ ತಾಪತ್ರಯಗಳಲ್ಲಿ ಹದಿಹರೆಯದ ಜೀವನವನ್ನು ಹಸಿರಾಗಿ ಅನುಭವಿಸುವ ಈ ಪಡ್ಡೆ ಯುವಕನ ಜೀವನದಲ್ಲಿ ಭಾರಿ ಬದಲಾವಣೆಯಾಗಿ, ಗಂಭೀರನಾಗಿಬಿಡುತ್ತಾನೆ. ಆಗತಾನೆ ಚಿಗುರೊಡೆದಿದ್ದ ಪ್ರೀತಿಯ ಗೆಳತಿ ಸಾನ್ವಿ ಜೋಸೆಫ್ ಳ(ರಶ್ಮಿಕಾ ಮಂದಣ್ಣ) ಅಕಾಲಿಕ ಸಾವು ಇದಕ್ಕೆ ಕಾರಣ. ಗಂಭೀರನಾದ ಕರ್ಣನ ಜೀವನದಲ್ಲಿ ಮತ್ತೆ ಬದಲಾವಣೆಯೇ ಗಾಳಿ ಬೀಸುವುದೆಂತು?

ಕಾಲೇಜು ದಿನಗಳ ಸಂತಸದ ಸಂಗತಿಗಳನ್ನು ಬಹಳ ಲವಲವಿಕೆಯಿಂದ ಕಟ್ಟಿಕೊಟ್ಟಿರುವುದು 'ಕಿರಿಕ್ ಪಾರ್ಟಿ'ಯ ಆಪ್ತ ಸಂಗತಿಗಳಲ್ಲೊಂದು. ಸಿನೆಮಾದ ಮೊದಲಾರ್ಧದಲ್ಲಿ ಮಲಯಾಳಂನ 'ಪ್ರೇಮಂ'ನ ದಟ್ಟ ಛಾಯೆ ವ್ಯಕ್ತವಾದರೂ, ಕರ್ಣ ಮತ್ತು ಸಾನ್ವಿಯ ನಡುವಿನ ರೊಮ್ಯಾಂಟಿಕ್ ಕ್ಷಣಗಳು ಪ್ರೇಕ್ಷಕನ ಅನುಭವಗಳು ಕೂಡ ಆಗುತ್ತವೆ. ಆ ಮಟ್ಟಿಗೆ ಈ ದೃಶ್ಯಗಳನ್ನು ಪ್ರೇಕ್ಷಕನಿಗೆ ದಾಟಿಸಲು ಸಿನೆಮಾ ಸಶಕ್ತವಾಗಿದೆ. ಬುದ್ಧಿ ಬಲಿತಂತೆ ಪ್ರಾಯದ ಚೇಷ್ಟೆಗಳನ್ನು ಕಳೆದುಕೊಳ್ಳುವ, ನಂತರ ಮತ್ತಾ–

| | |
|---|---|
| **ನಿರ್ದೇಶನ:** | **ರಿಶಬ್ ಶೆಟ್ಟಿ** |
| **ನಿರ್ಮಾಣ:** | **ಜಿ ಎಸ್ ಗುಪ್ತ, ರಕ್ಷಿತ್ ಶೆಟ್ಟಿ** |
| **ಪಾತ್ರವರ್ಗ:** | **ರಕ್ಷಿತ್ ಶೆಟ್ಟಿ, ರಶ್ಮಿಕ ಮಂದನ, ಸಯುಕ್ತ ಹೆಗ್ಡೆ, ಪ್ರಮೋದ್ ಶೆಟ್ಟಿ, ಅಚ್ಯುತ್‌ಕುಮಾರ್** |
| **ಬಿಡುಗಡೆ ದಿನಾಂಕ:** | **29 ಡಿಸೆಂಬರ್ 2016** |



ರಿಂದಲೋ –ಮತ್ತಾವುದ–ರಿಂದಲೋ ಅವುಗಳನ್ನು ಕಂಡುಕೊಳ್ಳುವ ಸಂಘರ್ಷದ ನಡುವೆ ಸಾಗುವ ಸಿನೆಮಾ, ದ್ವಿತೀಯಾರ್ಧಕ್ಕೆ ಗಂಭೀರತೆ ಪಡೆದುಕೊಳ್ಳುತ್ತದೆ. ಕರ್ಣ ಗಂಭೀರನಾಗಲು ಆರೋಪಿಸುವ ಕಾರಣ ಮತ್ತು ಆ ಕಾರಣವನ್ನು ಆರೋಪಿಸಿ ಅರ್ಥ ಮಾಡಿಸುವ ನಿರ್ದೇಶಕನ–ಕಥೆಗಾರನ ತವಕ, ಸಿನೆಮಾ ಎಲ್ಲೋ ಹಳಿ ತಪ್ಪಿದಂತೆ ಭಾಸವಾಗಲು ಕಾರಣವಾಗುತ್ತದೆ. ದ್ವಿತೀಯಾರ್ಧ ನಾಯಕನಟ ಕರ್ಣನ ವೈಭವೀಕರಣಕ್ಕೆ ಮೀಸಲಾಗಿ ಹತ್ತರಲ್ಲಿ ಹನ್ನೊಂದನೆಯ ಸಿನೆಮಾವಾಗಿ ಮಾರ್ಪಾಡಾಗುವ ಅಪಾಯಕ್ಕೆ ಸಿಲುಕುತ್ತದೆ. ಕರ್ಣನ ಜೀವನದಲ್ಲಿ ಮತ್ತೊಬ್ಬ ಯುವತಿ ಆರ್ಯಾಳ (ಸಂಯುಕ್ತ ಹೆಗಡೆ) ಪ್ರವೇಶ, ಕರ್ಣನ ವ್ಯಕ್ತಿತ್ವಕ್ಕಾಗಿ ಅವಳು ತೆಗೆದುಕೊಳ್ಳುವ ಆಸ್ಥೆ, ಕಾಲೇಜು ರಾಜಕಾರಣ ರಣರಂಗದಲ್ಲಿ ಕರ್ಣನ ಸುಲಭ ಜಯಭೇರಿ, ಎದುರಾಳಿಗಳನ್ನು ಪುಡಿಗುಟ್ಟುವುದು, ತನ್ನ ಹಳೆ ಪ್ರೇಯಸಿಯ ನೆನಪು ಮರುಕಳಿಸುವುದು ಹೀಗೆ ಪ್ರೆಡಿಕ್ಟಬಲ್ ಘಟನೆಗಳಿಂದ ತುಂಬಿದ ದ್ವಿತೀಯಾರ್ಧ ತುಸು ನಿರಾಸೆ ತಂದರು, ಬಹುಷಃ ಮತ್ತಾವ ಅತಿರೇಕದ–ಅನಗತ್ಯ ಹಾಸ್ಯವನ್ನು ಒಳಗೊಳ್ಳದೆ ಇರುವುದು, ಅಲ್ಲಲ್ಲಿ ಮೂಡುವ ನವಯವ್ವನದ ಹಾಡುಗಳು ಈ ನಿರಾಸೆಗೆ ಪರಿಹಾರ ನೀಡುತ್ತವೆ. ನಾಯಕನಟನ ವ್ಯಕ್ತಿತ್ವದ ಬದಲಾವಣೆಗೆ ಅಥವಾ ಅವನ ಅರಿವಿಗೆ ಆ ತೀವ್ರವಾದ ಕಾರಣಗಳನ್ನು ಆರೋಪಿಸದೆಯೂ, ಅದನ್ನು ಬಿಡಿಬಿಡಿಯಾಗಿ ವಿವ–ರಿಸುವ ಗೋಜಿಗೆ ಹೋಗದೆಯು ಇನ್ನು ಸ್ವಾಭಾವಿಕವಾಗಿ ಕಟ್ಟಿಕೊಟ್ಟಿದ್ದಲ್ಲಿ ಸಿನೆಮಾ ಇನ್ನಷ್ಟು ಆಪ್ತವಾಗುತ್ತಿತ್ತೇನೋ!

ರಕ್ಷಿತ್ ಶೆಟ್ಟಿ ನಟನೆಯಲ್ಲಿ ತಮ್ಮ ಹಿಂದಿನ ಸಿನೆಮಾಗಳಿಗಿಂತಲೂ ಸಾಕಷ್ಟು ಉತ್ತಮಗೊಂಡಿದ್ದಾರೆ. ಕಾಲೇಜು ಯುವಕನ ರೋಮ್ಯಾನ್ಸ್ ದೃಶ್ಯಗಳಲ್ಲಿ ಪಡ್ಡೆ ಯುವಕರು ಶಿಳ್ಳೆ ಹೊಡೆದು ಸಂಭ್ರಮಿಸುವಂತೆ ನಟಿಸಿದ್ದಾರೆ. ಚೊಚ್ಚಲ ಚಿತ್ರದಲ್ಲೇ ಭರವಸೆ ಮೂಡಿಸಿರುವುದು ರಶ್ಮಿಕಾ ಮಂದಣ್ಣ. ತಮ್ಮ ಪಾತ್ರದಲ್ಲಿ ನಿಖರವಾದ ನಟನೆ ನೀಡಿದ್ದಾರೆ, ಮತ್ತೊಬ್ಬ ನಟಿ ಸಂಯುಕ್ತ ಹೆಗಡೆ ಕೂಡ ಅಚ್ಚುಕಟ್ಟಾಗಿ ನಟಿಸಿದ್ದಾರೆ. ಅಚ್ಯುತ್ ಕುಮಾರ್ ಎಂದಿನಂತೆ ತಮ್ಮ ನಟನೆಯಿಂದ ಸಿನೆಮಾಗೆ ಬಲ ತುಂಬಿದ್ದಾರೆ ಮತ್ತು ಇತರ ಪೋಷಕನಟರ ಕೊಡುಗೆ ಕೂಡ ಗಮನಾರ್ಹ. ಪ್ರಾಯದ ಪರಿಸರವನ್ನು ಪರಿಣಾಮಕಾ–ರಿಯಾಗಿಸಲು ಕರ್ಮ್ ಚಾವ್ಲಾ ಅವರ ಕ್ಯಾಮರಾ, ಅಜನೀಶ್ ಲೋಕನಾಥ್ ಅವರ ಸಂಗೀತ ಕೂಡ ಸಹಕ–ರಿಸಿದೆ. ತಾಂತ್ರಿಕ ಗುಣಮಟ್ಟವನ್ನು ಕಾಯ್ದುಕೊಂಡಿರುವುದು ಚಿತ್ರಕಥೆಯ ಕೆಲವು ಬೇಸರದ ಆಯಾಮಗಳನ್ನು ಬದಿಗೆ ಸರಿಸಿ ಸರಿಪಡಿಸಲು ಪೂರಕವಾಗಿ ಸಹಾಯ ಮಾಡಿವೆ.

'ಪ್ರೇಮಂ' ಸೇರಿದಂತೆ ಒಂದೆರಡು ಸಿನೆಮಾಗಳನ್ನು ನೆನಪಿಸುವ, ಮತ್ತು ಅವುಗಳಿಂದ ಉತ್ತಮವಾದದ್ದನ್ನು ಆಯ್ದುಕೊಂಡು ಮತ್ತೊಂದು ಕಥೆ ಕಟ್ಟಿ, ಪ್ರಾಯದ ಚೇಷ್ಟೆಗಳನ್ನು ಅಪ್ಯಾಯಮಾನವಾಗಿ ಕಟ್ಟಿಕೊಟ್ಟು, ಬಹುಷಃ ಪಡ್ಡೆ ಯುವಕರನ್ನು ಗುರಿಯಾಗಿಸಿಕೊಂಡು ಹೀರೊ ವೈಭವವನ್ನು ಕೂಡ ತುಸು ಹೆಚ್ಚೇ ಎನ್ನುವಂತೆ ಚಿತ್ರಿಸಿ, ಇನ್ನಿತರ ಅತಿ–ರೇಕಗಳನ್ನು ತಗ್ಗಿಸಿ, ತಾಂತ್ರಿಕ ಆಯಾಮಗಳಲ್ಲಿ ಎಡವದೆ ನಿರ್ದೇಶಕ ರಿಷಬ್ ಶೆಟ್ಟಿ ವರ್ಷದ ಅಂತ್ಯದ ಪಾರ್ಟಿಗೆ ನಾಂದಿ ಹಾಡಿದ್ದಾರೆ. 'ಶುಭಮಂಗಳ' ಚಿತ್ರದ ಹಾಡನ್ನು ತುಸು ಬದಲಾಯಿಸಿದರೆ 'ಕಿರಿಕ್ ಪಾರ್ಟಿ'ಯಲ್ಲಿ ಪ್ರಾಯದ ಆಟ ಆ ಹುಡುಗಾಟ ಇನ್ನು ಮಾಸಿಲ್ಲ, ರೋಷದಿ ಚಿತ್ರಿಸಿದ ಭಾಗ ಮಾತ್ರ ಅಷ್ಟು ರುಚಿಸೋಲ್ಲ!

# ಕ್ರೀಡೆಯಲ್ಲಿ ಭಾಗವಹಿಸಲು ದೈಹಿಕ ಆರೋಗ್ಯ ಮುಖ್ಯ



ಕ್ರೀಡೆಗಳಲ್ಲಿ ಸಕ್ರೀಯವಾಗಿ ತೊಡಗಲು ದೈಹಿಕ ಆರೋಗ್ಯವು ಬಹಳ ಮುಖ್ಯವಾಗಿರುತ್ತದೆ. ವಿದ್ಯಾರ್ಥಿಗಳು ಪೌಷ್ಟಿಕ ಆಹಾರ ಸೇವನೆಯಿಂದ ದೇಹ ಮತ್ತು ಮನಸ್ಸುಗಳನ್ನು ಆರೋಗ್ಯವಾಗಿ–ರಿಸಿಕೊಂಡು ಕ್ರೀಡಾ ಸಾಧನೆಗೆ ಮುಂದಾಗಬೇಕೆಂದು ಗುಂಡ್ಲುಪೇಟೆ ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷ ಹಾಗೂ ಗುಂಡ್ಲುಪೇಟೆ ಪುರಸಭೆ ಮಾಜಿ ಅಧ್ಯಕ್ಷ ಎಸ್.ರಾಜಶೇಖರ್ ಅಭಿಪ್ರಾಯಪಟ್ಟರು. ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯದ ಅಲುಮಿನಿ ಅಸೋಸಿಯೇಷನ್ ನಿಂದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಬಾಲಕರ ಕಬಡ್ಡಿ ಮತ್ತು ಬಾಲಕಿಯರ ಥ್ರೋ ಬಾಲ್ ಪಂದ್ಯಾವಳಿ ವಿಜೇತರಿಗೆ ಬಹುಮಾನ ವಿತರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಾಲಕರ ಕಬಡ್ಡಿ ಮತ್ತು ಬಾಲಕಿಂ–ಯರ ಥ್ರೋಬಾಲ್ ಪಂದ್ಯಾವಳಿಗಳಲ್ಲಿ ಜಿಲ್ಲೆಯ ವಿವಿಧ ಶಾಲೆಗಳಿಂದ ಆಗಮಿಸಿದ್ದ ಒಟ್ಟು 18 ತಂಡಗಳು ಪಾಲ್ಗೊಂಡಿದ್ದವು. ಬಾಲಕಿಯರ ಥ್ರೋಬಾಲ್ ವಿಭಾಗದಲ್ಲಿ ಇಲವಾಲದ ಸೆಂಟ್ ಜೋಸೆಫ್ ಸೆಂಟ್ರಲ್ ಹೈಸ್ಕೂಲ್ ಪ್ರಥಮ ಹಾಗೂ ವಿಜಯನಗರದ ಸೇಂಟ್ ಜೋಸೆಫ್ ಸೆಂಟ್ರಲ್ ಹೈಸ್ಕೂಲ್ ದ್ವಿತೀಯ ಸ್ಥಾನ ಪಡೆದವು.

ಬಾಲಕರ ವಿಭಾಗದ ಕಬಡ್ಡಿಯಲ್ಲಿ ಮೇದರ ಬ್ಲಾಕ್ ಸರ್ಕಾರಿ ಪ್ರೌಢ ಶಾಲೆ ಪ್ರಥಮ ಸ್ಥಾನ ಪಡೆದರೆ, ಮ–ರಿಮಲ್ಲಪ್ಪ ಪ್ರೌಢ ಶಾಲೆ ದ್ವಿತೀಯ ಸ್ಥಾನವನ್ನು ಗಳಿಸಿತು. ವಿಜೇತ ತಂಡಗಳಿಗೆ ಕಪ್ ಹಾಗೂ ನಗದು ಬಹುಮಾನವನ್ನು ನೀಡಲಾಯಿತು. ಶಾಸಕ ಎಂ.ಕೆ.ಸೋಮಶೇಖರ್ ರೋಟರಿ ಮೈಸೂರಿನ ಮಾಜಿ ಅಧ್ಯಕ್ಷ ಎಚ್.ಎಸ್.ವೆಂಕಟೇಶ್, ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ವಿಶ್ರಾಂತ ನಿರ್ದೇಶಕ ಡಾ.ಸಿ.ಕೃಷ್ಣ, ಡಾ.ಪಿ.ಕೃಷ್ಣಯ್ಯ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಅಕ್ಷಯ್ ಕೆ